ಶ್ರೀ ಬಿ.ಹೆಚ್. ಬನ್ನಿಕೋಡ್ : ಮುಂಬೈ ಕರ್ನಾಟಕ ಅಭಿವೃದ್ಧಿಯ ಬಗ್ಗೆ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಹೇಳಿಲ್ಲ. ಆ ಪಿಚಾರ ಇದೆಯೋ ಅಥವಾ ಇಲ್ಲವೋ ಮಾಡುತ್ತಾರೋ ಅಥವಾ ಇಲ್ಲವೋ ಎಂಬ ಮಾತನ್ನು ಹೇಳಿಲ್ಲ. ನಾನು ಎರಡೂ ಮೂರು ಸಾರಿ ಒತ್ತಾಯ ಮಾಡಿದ್ದೇನೆ. ಸರ್ಕಾರದ ಅಭಿಪ್ರಾಯವನ್ನು ಹೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನಮ್ಮ ತಾಲ್ಲೂಕಿನಲ್ಲಿ ಒಂದು ಲಕ್ಷ 7 ಸಾವಿರ ಎಕರೆಗೆ ನೀರು ಬರುತ್ತಿದೆ.

ಅಧ್ಯಕ್ಷರು : ಬರದೆ ಇನ್ನೆಲ್ಲಿ ಹೋಗುತ್ತದೆ. ಅದಕ್ಕಿಂತ ಇನ್ನೇನು ಬೇಕು?

ಶ್ರೀ ಆರ್.ಎಲ್. ಜಾಲಪ್ಪ : ಕುಡಿಯುವ ನೀರಿಲ್ಲದೆ ಲಾಟರಿಯನ್ನು ಹೊಡೆಯುತ್ತಿದ್ದೇವೆ. ನಮ್ಮನ್ನು ಕೇಳುವವರೇ ಗತಿ ಇಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಜಾಲಪ್ಪನವರೆ ಈಗ ನೀರು ಬಂದು ಬಿಡುತ್ತದೆ.

ಅಧ್ಯಕ್ಷರು : ಬನ್ನಿಕೋಡ್‌ರವರೆ ನೀವು ಲಕ್ಕಿಡಿಪ್ ಮೆಂಬರ್ ಅವರು ಲಾಟರಿ ಮೆಂಬರ್.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1991ನೇ ಇಸವಿಯ ಕರ್ನಾಟಕ ಧನ ವಿಯೋಗ (ನಂ.2) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು.

ಖಂಡ 2ರಿಂದ 3ರವರೆಗೆ

ಅಧ್ಯಕ್ಷರು: ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತ್ತು

(ಖಂಡ 2 ಮತ್ತು 3 ಎರಡೂ ಸೇರಿದಂಥೆ ಈ ವಿಧೇಯತಕ್ಕೆ ಸೇರಿಸಲ್ಪಟ್ಟಿತು)

ಖಂಡ 2 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ ಮೊದಲನೇಯ ಖಂಡ ಧೀಫ್ ಶಿರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ , ವಿಧೇಯಕದ ಭಾಗವಾಗಿತುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಂಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಅಧ್ಯಕ್ಷರು : ಈಗ ಮುಖ್ಯಮಂತ್ರಿಗಳು ಪ್ರಸ್ಥಾವವನ್ನು ಅಂಗೀರಿಸಲು ಮಂಡಿಸುವುದ್ರು.

ಶ್ರೀ ಎಸ್. ಬಂಗಾರಪ್ಪ : ಪ್ರಸ್ತಾವದ ಅಂಗೀಕಾರ 1991ರ ಕರ್ನಾಟಕ ಧನ ವಿನಿಯೋಗ (2) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1991 ಕರ್ನಾಟಕ ಧನ ವಿನಿಯೋಗ (2) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ಈಗ ಚುಕ್ಕೆ ಗುರ್ತಿನ ಪ್ರಶ್ನೆಗಳನ್ನು ಶುರು ಮಾಡೋಣ ನಾನು ವಿತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಅವಕಾಶ ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸಭಾಧ್ಯಕ್ಷರೆ ಸರ್ಕಾರಕ್ಕೆ ನನ್ನದೊಂದು ಸಲಹೆ ಇದೆ. ಈಗ ಸದನವು 25-9-91, 26-9-91 ಮತ್ತು 27-9-91 ಈ ಮೂರು ದಿನಗಳಲ್ಲಿ ಕುಳಿತುಕೊಂಡು ಬಜೆಟ್ ಬಗ್ಗೆ ಅನೇಕ ವಿಚಾರಗಳ ಬಗ್ಗೆ ನಾವು ಸಾಕಷ್ಟು ಚರ್ಚೆಮಾಡಬೇಕೆಂಬ ಆಸೆ ಇದ್ದರೂ ಆಗಿಲ್ಲ. ಅನೇಕ ವಿಚಾರಗಳಿವೆ ಅದನ್ನು ಈ ಸದನದಲ್ಲಿ ಒಡ್ಡಬೇಕಾಗಿದೆ. ಸರ್ಕಾರದ ಪರವಾಗಿ ಕೆಲವು ಮಸೂದೆಗಳನ್ನು ಸಹಾ ಮಂಡಿಸಿದ್ದಾರೆ. ನಾವು ಅಪ್ರೋಪ್ರಿಯೇಶನ್ ಬಿಲ್ಲನ್ನು ಪಾಸ್ ಮಾಡಿಕೊಟ್ಟಿದ್ದೇವೆ. ಬಹುಶಃ ಹನ್ನೆರಡು ಗಂಟೆಗಳ ಕಾಲ ನಾವು ಹೇಳಿದ ಪ್ರಕಾರವಾಗಿ 20ನೇ ತಾರೀಖು ನಾವು ಮಾಡಿಕೊಡುತ್ತೇವೆಂದು ಹೇಳಿದ್ದೇವು ಅದೇ ರೀತಿ ಮಾಡಿಕೊಟ್ಟಿದ್ದೇವೆ. ಸದನವನ್ನು ನಾಲ್ಕೈದು ದಿವಸಗಳವರೆಗೆ ಮುಂದಕ್ಕೆ ಹಾಕಿ. ಅನೇಕ ವಿಚಾರಗಳ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : 25ನೇ ತಾರೀಖು ಸದನದ ಕಾರ್ಯಕಲಾಪಗಳ ಸಮಿತಿ ಕರೆಯುತ್ತೇನೆ ಅವತ್ತಿನ ದಿವಸ ನಡೆಯುತ್ತದೆ. ನೀವು ಇದನ್ನು ಮಂಡಿಸಬಹುದು. ಈಗ ಚುಕ್ಕೆಗುರುತಿನ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು: ಮಾನ್ಯ ಅಧ್ಯಕ್ಷರೆ ದಿನಾಂಕ 20-9-91ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ರಹಿತ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದ. ಕನ್ನಡ ಜಿಲ್ಲೆಯಲ್ಲಿ ಸಿಗಡಿ ಸಂಸ್ಕರಣ ಕೇಂದ್ರ

3690 - ಶ್ರೀ ಆರ್.ಬಿ. ಚೌದರಿ (ಸಿಂಧಗಿ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಕೆಎಸ್ಐಐಡಿಸಿ ಸಂಸ್ಥೆಯವರು ಪ್ರಾನ್ ಫಾರಂ ವಿತ್ ಇನ್‌ಹೌಸ್ ಪ್ರೊಸೆಸಿಂಗ್ ಫೆಸಿಲಿಟಿಯ ಮೇರೆಗೆ ಜಂಟಿ ವಲಯದಲ್ಲಿ ಪ್ರಾನ್ ಫಾರಂನ್ನು ಸ್ಥಾಪಿಸಲು ಜಾಹಿರಾತು ನೀಡಿತ್ತೇ?

ಆ) ಮಾನ್ಯ ಮುಖ್ಯಮಂತ್ರಿಗಳು ಆಗಸ್ಟ್ 7, 1991 ರಂದು ಪ್ರಕಟಿಸಿರುವ ಕೈಗಾರಿಕಾ ತತ್ವಗಳ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ಉದ್ದಿಮೆದಾರರಿಗೆ ಆದ್ಯತೆ ನೀಡಿದೆಯೇ?

ಇ) ಈ ಘಟಕವು ಮೀನುಗಾರರ ಉದ್ದಿಮೆಯಾದ ಕಾರಣ, ಮೀನುಗಾರರ ಜನಾಂಗಕ್ಕೆ ಆದ್ಯತೆ ನೀಡಲಾಗಿದೆಯೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮದ್ಯಮ ಕೈಗಾರಿಕಾ ಸಚಿವರು):

ಅ) ಹೌದು.

ಆ) ಹೌದು.